**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 1464/2022**

| | |
|---|---|
| **ಪಿರ್ಯಾದಿದಾರರುಃ** | ಕಾಂತರಾಜು ಡಿ.ಕೆ. ಬಿನ್ ಕೆಂಪೇಗೌಡ ಪಿ.,<br>ಸುಮಾರು 43 ವರ್ಷ ವಯಸ್ಸು,<br>ವಾಸಃ ಪಿ. ದಾಸಪುರ ಗ್ರಾಮ, ಕಸಬಾ ಹೋಬಳಿ,<br>ಚನ್ನರಾಯಪಟ್ಟಣ ತಾಲ್ಲೂಕು,<br>ಹಾಸನ ಜಿಲ್ಲೆ. |
| | **ವಿರುದ್ಧ** |
| **ಆರೋಪಿ/ತರುಃ** | ಬಿ.ಶಿವಕುಮಾರ್ ಬಿನ್ ರಾಮಣ್ಣ,<br>ಸುಮಾರು 45 ವರ್ಷ ವಯಸ್ಸು,<br>ಕೆನರಾ ಬ್ಯಾಂಕ್ ನೌಕರ, ನುಗ್ಗೇಹಳ್ಳಿ ಶಾಖೆ,<br>ನುಗ್ಗೇಹಳ್ಳಿ ಗ್ರಾಮ ಮತ್ತು ಹೋಬಳಿ,<br>ಚನ್ನರಾಯಪಟ್ಟಣ ತಾಲ್ಲೂಕು,<br>ಹಾಸನ ಜಿಲ್ಲೆ. |

## ಆಪಾದನೆ

ಶ್ರೀ ದೀಪು ಬಿ.ಸಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚನ್ನರಾಯಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ವಿರುದ್ಧ ಕೆಳಕಂಡ ಆರೋಪಣೆ ಹೊರಿಸುವುದೇನೆಂದರೆ,

ಈ ಪ್ರಕರಣದ ಪಿರ್ಯಾದಿಯು ನೀಡಿದ ದೂರಿನ ಆಧಾರದ ಮೇಲಿಂದ, ಆರೋಪಿಯಾದ ನೀವು ಪಿರ್ಯಾದಿರವರಿಗೆ ಪರಿಚಯದವರಿದ್ದು, ಆರೋಪಿಯಾದ ನೀವು ನಿಮ್ಮ ಗೃಹಕೃತ್ಯದ ಖರ್ಚಿನ ಸಲುವಾಗಿ ಹಾಗೂ ನಿಮ್ಮ ಕೈ ಸಾಲ ತೀರುವಳಿ ಮಾಡುವ ಸಲುವಾಗಿ ರೂ.3,00,000.00 ಗಳನ್ನು ಸಾಲವಾಗಿ ದಿನಾಂಕ 18.08.2022 ರಂದು ಪಡೆದುಕೊಂಡು, ನೀವು ಸದರಿ ಹಣದ ಭದ್ರತೆಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ,

ಕುದೂರು ಶಾಖೆಯ ಚೆಕ್ ನಂಃ 119601 ಅನ್ನು ರೂ.3,00,000.00 ಮೊತ್ತಕ್ಕೆ ದಿನಾಂಕ 18.10.2022 ಕ್ಕೆ ಫಿರ್ಯಾದಿಗೆ ಕೊಟ್ಟಿದ್ದು, ಸದರಿ ಚೆಕ್‌ನ್ನು ಫಿರ್ಯಾದಿದಾರರು ನಗಧೀಕರಣಕ್ಕಾಗಿ ತಾನು ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಚನ್ನರಾಯಪಟ್ಟಣ ಶಾಖೆಗೆ ದಿನಾಂಕ 18.10.2022 ರಂದು ಸಲ್ಲಿಸಿದಾಗ **"Payment stopped by drawer"** ಎಂಬ ಹಿಂಬರಹದೊಂದಿಗೆ ದಿನಾಂಕ 20.10.2022 ರಂದು ವಾಪಸ್ಸಾಗಿರುತ್ತದೆ. ಸದರಿ ವಿಚಾರವನ್ನು ನಿಮಗೆ ತಿಳಿಸಲಾಗಿ ನೀವು ಉಡಾಫೆ ಉತ್ತರವನ್ನು ನೀಡಿರುತ್ತೀರಿ. ಆ ಬಗ್ಗೆ ಫಿರ್ಯಾದುದಾರರು ನಿಮಗೆ ದಿನಾಂಕ 28.10.2022 ರಂದು ತಮ್ಮ ವಕೀಲರ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸ್ ನಿಮಗೆ ದಿನಾಂಕ 29.10.2022 ರಂದು ಜಾರಿಯಾಗಿರುತ್ತದೆ. ಇಲ್ಲಿಯವರೆಗೆ ನೀವು ಚೆಕ್‌ನ ಮೊತ್ತವನ್ನು ಪಾವತಿಸಿರುವುದಿಲ್ಲ, ಕಾರಣ ನೀವು ಉದ್ದೇಶಪೂರ್ವಕವಾಗಿ ಫಿರ್ಯಾದಿದಾರರ ಹಣವನ್ನು ಕೊಡದೆ ಚೆಕ್‌ನ್ನು ನೀಡಿದ್ದರಿಂದ ಸದರಿ ಚೆಕ್ ಬ್ಯಾಂಕ್‌ನಿಂದ ನಗಧೀಕರಣಗೊಳ್ಳದೇ ಅಮಾನ್ಯಗೊಂಡಿರುತ್ತದೆ. ಆದ್ದರಿಂದ ನೀವು **ಲಿಖಿತಗಳ ವರ್ಗಾವಣೆ ಅಧಿನಿಯಮ ಕಾಯ್ದೆ ಕಲಂಃ 138** ರ ಅಡಿಯಲ್ಲಿ ಅಪರಾಧ ಮಾಡಿರುವಿರಿ ಎಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

1. ಮೇಲೆ ಓದಿ ಹೇಳಿದ ಆರೋಪವು ನಿಮಗೆ ಅರ್ಥವಾಯಿತೆ ?

   **ಉತ್ತರ ಃ** ಅರ್ಥವಾಯಿತು

2. ನೀವು ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ಪ್ರತಿರಕ್ಷಣೆ ಇದೆಯಾ ?

   **ಉತ್ತರ ಃ** ಪ್ರತಿರಕ್ಷಣೆ ಇದೆ

(ಸದರಿ ಆರೋಪವನ್ನು ಆರೋಪಿಗೆ ಓದಿ, ಹೇಳಿ, ಕೇಳಿ ಆರೋಪಿಯು ಕೊಟ್ಟ ಉತ್ತರವನ್ನು ಅವರ ಹೇಳಿಕೆಯಂತೆ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ).

ದಿನಾಂಕಃ **12.09.2023**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.